**ಸಾಕ್ಷಿಗೆ ದಿನಾಂಕ : 09-09-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ.ಎಸ್.ಬಿ.ಜೆ ವಕೀಲರಿಂದ ಆರೋಪಿ ಪರವಾಗಿ**

1. ನಿಮ್ಮ ಹಿಂದಿನ ಪಾಟೀ ಸವಾಲಿನಲ್ಲಿ 3 ವ್ಯವಹಾರಗಳು ಆಗಿವೆ ಎಂದು ಹೇಳಿದ್ದು, ಆ ರೀತಿ ನಿಮ್ಮ ದೂರಿನಲ್ಲಿ ಆಗಲೀ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆಗಲೀ ಹೇಳಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಯಾವ ಕಂಡಿಕೆಯಲ್ಲಿ ಆ ರೀತಿ ನಮೂದಿಸಿದ್ದೀರಿ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಯಾವ ದಿನಾಂಕದಂದು ಚೆಕ್ಕನ್ನು ನಗದೀಕರಣಕ್ಕೆ ಹಾಜರಪಡಿಸಲಾಯಿತು ಎಂದು ಹೇಳಿ ಬರೆಸಿದ್ದೀರಾ ಎಂದರೆ ಬಹಳ ದಿನಗಳು ಆದ ಕಾರಣ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ದಿನಾಂಕದಂದು ಸದರಿ ಚೆಕ ಸಾಕಷ್ಟು ಹಣ ಇಲ್ಲ ಎಂಬ ಷರಾದೊಂದಿಗೆ ಹಿಂದಿರುಗಿತು ಎಂದರೆ ದಿಃ02.12.2021 ರಂದು ಎಂದು ಸಾಕ್ಷಿ ಹೇಳುತ್ತಾರೆ. ನನ್ನ ವಕೀಲರ ಮೂಲಕ ಆರೋಪಿತಳಿಗೆ ನೋಟಿಸ್ ನೀಡಿದ ದಿನಾಂಕ ನೆನಪಿಲ್ಲ. ಆರೋಪಿತನ ಚೆಕ ಕರ್ನಾಟಕ ಬ್ಯಾಂಕ, ಮುಧೋಳ ಶಾಖೆಯದ್ದು ಇದ್ದು, ಚೆಕ ನಂಬರ ನನಗೆ ನೆನಪಿಲ್ಲ. ಸದರಿ ಚೆಕ್ಕನ್ನು ಸ್ಟೇಟ್ ಬ್ಯಾಂಕ ಅಪ್ ಇಂಡಿಯಾದಲ್ಲಿ ನಗದೀಕರಣಗೊಳಿಸಲು ನೀಡಿದ್ದೆ. ಸದರಿ ಚೆಕ್ಕನ್ನು ಹಾಜರಪಡಿಸಿದ ಬಗ್ಗೆ ಡೆಪಾಸಿಟ್ ಸ್ಲೀಪ್ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಿಮಗೆ 19 ಲಕ್ಷ 50 ಸಾವಿರಷ್ಟು ಮೊತ್ತ ಕೊಡುವ ಆರ್ಥಿಕ ಸಾಮರ್ಥ್ಯ ಇದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿಲ್ಲ, ಹಾಜರಪಡಿಸುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ.

2. ನಿಮ್ಮ ವಿರುದ್ದ ಸಿ.ಸಿ.ನಂ.614/2021, 616/2021, 618/2021 ರ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ ನಿಮಗೆ ಶಿಕ್ಷೆ ಆಗಿದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಹಣವನ್ನು ನಾನು ನ್ಯಾಯಾಲಯದಲ್ಲ್ ತುಂಬಿದ್ದೇನೆ ಎಂದು ಹೇಳುತ್ತಾರೆ. ಶಿಕ್ಷೆ ಆದ ನಂತರ ಕ್ರಿಮಿನಲ್ ಅಫೀಲ್ ಸಂಖ್ಯೆ 5023/2023 ರಂತೆ ಮೇಲ್ಮನವಿ ಸಲ್ಲಿಸಿದ್ದೀರಿ ಎಂದರೆ ಸರಿ. ಅಲ್ಲಿಯು ವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿಯಲಾಗಿದೆ ಎಂದರೆ ಸರಿ. ನೀವು ಸದರಿ ಕ್ರಿಮಿನಲ್ ಅಫೀಲ ಸಂಖ್ಯೆ 5023/2023 ರಲ್ಲಿ ನೀವು ದಿಃ16.05.2023 ರಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸಾಕ್ಷಿಗೆ ಈ ಸದರಿ ಅರ್ಜಿಯ 2 ಕಂಡಿಕೆಯನ್ನು ಓದಿ ತೋರಿಸುತ್ತಿದ್ದು, ಆ ರೀತಿ ಹೇಳಿ ಬರೆಸಿದ್ದೀರಾ ಎಂದರೆ ಹೌದು ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು.

3. ಕ್ರಿಮಿನಲ್ ಅಫೀಲ್ ಸಂಖ್ಯೆ 5020/2023 ರ ಆದೇಶ ಪುಟಗಳು ಮತ್ತು ಮೇಲ್ಮನವಿ ಅರ್ಜಿಗಳ ದೃಢೀಕೃತ ನಕಲು ತೋರಿಸುತ್ತಿದ್ದು ಅವುಗಳನ್ನು ಸಾಕ್ಷಿ ಗುರುತಿಸಿದ್ದರಿಂದ ನಿಡಿ-2 ಮತ್ತು ನಿಡಿ-3 ಎಂದು, 5022/2023 ರ ಆದೇಶ ಪುಟಗಳು ಮತ್ತು ಮೇಲ್ಮನವಿ ಅರ್ಜಿಗಳ ದೃಢೀಕೃತ ನಕಲು ತೋರಿಸುತ್ತಿದ್ದು ಅವುಗಳನ್ನು ಸಾಕ್ಷಿ ಗುರುತಿಸಿದ್ದರಿಂದ ನಿಡಿ-4 ಮತ್ತು ನಿಡಿ-5 ಎಂದು, 5023/2023 ರ ಆದೇಶ ಪುಟಗಳು ಮತ್ತು ಮೇಲ್ಮನವಿ ಅರ್ಜಿಗಳ ದೃಢೀಕೃತ ನಕಲು ತೋರಿಸುತ್ತಿದ್ದು ಅವುಗಳನ್ನು ಸಾಕ್ಷಿ ಗುರುತಿಸಿದ್ದರಿಂದ ನಿಡಿ-6 ಮತ್ತು ನಿಡಿ-7 ಎಂದು ಗುರುತಿಸಲಾಯಿತು. ನೀವು ಸದರಿ ಮೇಲ್ಮನವಿಗಳಲ್ಲಿ ನೀವು ಬಡವರಿದ್ದೀರಿ ಎಂದು ನಮೂದಿಸಿದ್ದ ಕಾರಣ ನಿಮಗೆ ಆರೋಪಿತನಿಗೆ 19 ಲಕ್ಷ 50 ಸಾವಿರ ಮೊತ್ತ ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಹೆಸರಿನಲ್ಲಿ 70 ಏಕರೆ ಸ್ಥಿರಾಸ್ತಿ ಇದೆ ಎಂದು ಹೇಳುತ್ತಾರೆ. 10 ಲಕ್ಷ ರೂಪಾಯಿಗಳಿಗೆ ನಿಮಗೆ ಶಿಕ್ಷೆ ಆಗಿದ್ದು 25 ಪ್ರತಿಶತ ಮೊತ್ತ ಕೊಡಲು ಸಾಮರ್ಥ್ಯ ಇಲ್ಲ ಎಂದು ನೀವು ಹೇಳಿ ಬರೆಸಿದ್ದೀರಿ ಎಂದರೆ ಆ ರೀತಿ ಬರೆಸಿದ್ದು ನನಗೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮಗೆ 2 ½ ಲಕ್ಷ ರೂಪಾಯಿ ನ್ಯಾಯಾಲಯದಲ್ಲಿ ಠೇವಣಿ ಮಾಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸಾಕ್ಷಿಯು ಆಗ ನನಗೆ 15 ದಿನಗಳ ಅವಧಿಯವರೆಗೆ ಹುಷಾರ ಇರಲಿಲ್ಲ ಎಂದು ಹೇಳುತ್ತಾರೆ. ದಿಃ16.05.2023 ರಂದು ನೀವು ನ್ಯಾಯಾಲಯದ ಮುಂದೆ ಹಾಜರ ಇದ್ದೀರಿ ಎಂದರೆ ಸಾಕ್ಷಿಯು ಮೊದಲು ಹೌದು ಎಂದು ನುಡಿದು ನಂತರ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

4. ಸಾಕ್ಷಿಗೆ ಈಗ 2 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು, ಅವುಗಳಲ್ಲಿ ತಾನು ಇದ್ದೇನೆ ಎಂದು ಹಾಗೂ ತನ್ನ ಕೈಯಲ್ಲಿ ಚೆಕ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಗೆ ಈ ಮತ್ತೊಂದು ಛಾಯಾಚಿತ್ರ ತೋರಿಸುತ್ತಿದ್ದು, ಅದೇ ಚೆಕ್ಕನ್ನು ಆರೋಪಿತರು ನೀಡಿದ್ದರು ಎಂದರೆ ಸಾಕ್ಷಿಯು ಮೊದಲು ಅದೇ ಚೆಕ್ಕನ್ನು ನೀಡಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಮೊದಲು ಆ ರೀತಿ ಚೆಕ್ಕನ್ನು ನೀಡಿದ್ದು ಮರುದಿನ ಬಂದು ಪೂರ್ತಿಯಾಗಿ ಬರೆದುಕೊಟ್ಟರು ಎಂದು ಹೇಳುತ್ತಾರೆ. ಸಾಕ್ಷಿಯು ಛಾಯಾಚಿತ್ರಗಳನ್ನು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿದ್ದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಡಿ-8 ರಿಂದ ನಿಡಿ-10 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಡಿ-10 ಚೆಕ್ಕನ್ನು ತೋರಿಸುತ್ತಿದ್ದು, ಅದರಲ್ಲಿ ಎಷ್ಟು ಮೊತ್ತ ನಮೂದಿಸಲಾಗಿದೆ ಎಂದರೆ 9 ಲಕ್ಷ 50 ಸಾವಿರ ರೂಪಾಯಿ ಎಂದು ನಮೂದಿಸಲಾಗಿದೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಆ ದಿನ

ಬಂದಾಗ ನನ್ನ ಖಾತೆಯಲ್ಲಿ 9 ಲಕ್ಷ 50 ಸಾವಿರ ಇದೆ ಎಂದು ಚೆಕ ನೀಡಿದರು ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-10 ಚೆಕ್ಕನ್ನು ಯಾವ ದಿನಾಂಕದಂದು ನೀಡಿದರು ಎಂದರೆ ನೆನಪಿಲ್ಲ. ನೀವು ಹೇಳಿದಂತೆ ಮರುದಿನ ಆದ ದಿನಾಂಕ ಹೇಳಬಹುದಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮೊದಲನೇ ದಿನದಂದು 9 ಲಕ್ಷ 50 ಸಾವಿರ ಚೆಕ ನೀಡಿದರು ಎಂದು ಮರುದಿನ ಬದಲಾವಣೆ ಮಾಡಿದರು ಎಂದು ನಿಮ್ಮ ದೂರಿನಲ್ಲಿ ಆಗಲೀ, ಮುಖ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಹೇಳಿ ಬರೆಸಿದ್ದೀರಾ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-1 ಚೆಕನಲ್ಲಿ 9 ಲಕ್ಷ 50 ಸಾವಿರ ಇದ್ದದ್ದನ್ನು 19 ಲಕ್ಷ 50 ಸಾವಿರ ರೂಪಾಯಿ ಎಂದು ನೀವೇ ತಿದಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಕ್ಷರಗಳಲ್ಲಿ ಸರಿಯಾಗಿ ನಮೂದು ಇದೆ ಎಂದು ಹೇಳುತ್ತಾರೆ. 9 ಲಕ್ಷ 50 ಸಾವಿರ ರೂಪಾಯಿ ಇದಿದ್ದಕ್ಕೆ ಹಿಂದೆ “1” ಸೇರಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

5. ನಿಪಿ-5 ದಾಖಲಾತಿಯನ್ನು ನೀವೇ ಮನೆಯಲ್ಲಿ ತಯಾರಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನಿಗೆ ಮತ್ತು ನಿಮಗೆ ಯಾವುದೇ ಪರಿಚಯ ಇಲ್ಲ, ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತ ಎಂದು ಅಷ್ಟು ದೊಡ್ಡ ಮೊತ್ತದ ವ್ಯವಹಾರ ಮಾಡಿಲ್ಲ, ಆತನ ಖಾತೆಯ ಮೂಲಕ ಅಷ್ಟು ದೊಡ್ಡ ಮೊತ್ತದ ವ್ಯವಹಾರ ಆಗಿಲ್ಲ ಎಂದರೆ ಸಾಕ್ಷಿಯು ಆತ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಾನೆ ಎಂದು ಹೇಳುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಮಗೆ ಗೊತ್ತಿಲ್ಲ ಎಂದರೆ ಬಹಳ ದಿನಗಳ ಆದ ಕಾರಣ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ದೂರಿನಲ್ಲಿ ಏನು ಬರೆಸಿದ್ದೀರಿ ಎಂದು ನಿಮಗೆ ಗೊತ್ತಿಲ್ಲ ಎಂದರೆ ನೆನಪಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಮತ್ತು ಆರೋಪಿತನ ನಡುವೆ ಯಾವುದೇ ವ್ಯವಹಾರ ಆಗದೇ ಇದ್ದರೂ ಸಹ ನೀವು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, ಸುಳ್ಳು ದೂರು ಸಲ್ಲಿಸಿ, ಸುಳ್ಳು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ . ಹೇ. ಕೆ . ಸರಿ ಅದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ